ಪರೀಕ್ಷೆಯಲ್ಲಿ ವಿದ್ಯಾರ್ಥಿಯ ಯೋಗ್ಯತೆ ಅಳೆಯುತ್ತಾರಲ್ಲ. ಪಿಎಚ್.ಡಿ. ವಿದ್ಯಾರ್ಥಿಗಳಿಂದಲೂ ದಿನಕ್ಕೋ ವಾರಕ್ಕೋ ಒಂದು ಸಲ ಆ ರೀತಿಯ ಪರೀಕ್ಷೆಗಳನ್ನು ಬರೆಸಿದರೆ ನೈಜವಾದ್ದೇನು ಎಂದು ಗೊತ್ತಾಗುತ್ತದಲ್ಲವೇ? ಆ ಥರದ ಮಾನದಂಡಗಳನ್ನು ರೂಪಿಸುವುದು ಅನಿವಾರ್ಯವಾಗಿದೆ.

ಇವುಗಳನ್ನೆಲ್ಲ ಸರ್ಕಾರವೇ ಕಾನೂನಿನ ಮೂಲಕ ಜಾರಿಗೆ ತರಬೇಕು. ಸರ್ಕಾರವೇನಾದರೂ ಹಾಗೆ ಮಾಡಲು ಹೋದರೆ ಈ ಸರ್ಕಾರ ಸರಿ ಇಲ್ಲ ಎನ್ನುವ ಭಾವನೆ ಬರುತ್ತದೆ. ಅಂಥ ಸಂದರ್ಭದಲ್ಲಿ ಸರ್ಕಾರ ಸರಿ ಇಲ್ಲ ಎಂದು ಬೆಂಬಲ ಕೊಡುವವರೂ ಹೆಚ್ಚಿನ ಮಂದಿ ಇದ್ದಾರೆ.

◆ **ಜನಸಾಮಾನ್ಯರು ಮತ್ತು ಸಂಶೋಧಕರ ನಡುವಿನ ಅಂತರ ಮೊದಲಿಂದಲೂ ಇದೆ. ಅದನ್ನು ಮೀರುವ ದಾರಿಗಳೇನು?**

ಅದು ಸಹಜವೇ. ಆಧಾರ ಕೊಟ್ಟು ಬರೆಯುವಂಥ ಸಂಶೋಧಕರ ಗುಂಪೇ ಬೇರೆ ಇದೆ. ಜನಪ್ರಿಯವಾಗಿ ಬರೆಯುವಂಥವರ ಗುಂಪೇ ಬೇರೆ ಇದೆ. ಏಕಕಾಲದಲ್ಲಿ ಸಂಶೋಧಕನೂ ಆಗಿ ಜನಪ್ರಿಯ ಬರಹಗಾರನೂ ಆಗಿರುವುದು ಕಷ್ಟಸಾಧ್ಯವೇ. ಸಂಶೋಧಕ ಆಧಾರ ಕೊಟ್ಟು ಬರೆಯುವಾಗ ಭಾಷೆ ಬಿಗಿಯಾಗಿಯೇ ಇರುತ್ತದೆ. ಸಂಶೋಧಕ ಏನನ್ನು ಬರೆಯುತ್ತಾನೋ ಅದನ್ನು ಅಧ್ಯಯನ ಮಾಡಿ ಜನಪ್ರಿಯ ಶೈಲಿ ಉಳ್ಳವನು ಖಂಡಿತ ಜನರಿಗೆ ತಲುಪಿಸಲು ಸಾಧ್ಯ ಇದೆ. ಹಾಗೆ ತಲುಪಿಸಿದಾಗ ಸಂಶೋಧಕ ಜನರಿಗೂ ಹತ್ತಿರ ಆಗ್ತಾನೆ. ಜನಪ್ರಿಯವಾಗಿ ಬರೆಯುವವರೂ ಜನರಿಗೆ ಹತ್ತಿರ ಆಗುತ್ತಾರೆ.

◆ **ಕನ್ನಡದಲ್ಲಿ ನಡೆದ ಸಂಶೋಧನೆಗಳನ್ನು ಹೊರಗಿನ ಜಗತ್ತಿಗೆ ಪರಿಚಯ ಮಾಡಿಕೊಡುವ ಪ್ರಯತ್ನಗಳು ಎಷ್ಟರಮಟ್ಟಿಗೆ ನಡೆದಿವೆ?**

ಅದು ನಡೀತಾ ಇದ್ರೂ ನಡಿತಿಲ್ಲ ಎಂದು ಹೇಳುವ ಪರಿಸ್ಥಿತಿ ಇದೆ. ಕೆಲವು ಸಲ ಕನ್ನಡದಲ್ಲಿರುವುದನ್ನು ಇಂಗ್ಲಿಷಿಗೆ ಸಮರ್ಥವಾಗಿ ಮತ್ತು ಸಮರ್ಪಕವಾಗಿ ಭಾಷಾಂತರ ಮಾಡುವವರ ಕೊರತೆಯೂ ಇದೆ. ಅದರಲ್ಲಿಯೂ ಪ್ರಾಚೀನ ಸಾಹಿತ್ಯದಲ್ಲಿ ಅನುವಾದದ ಸಮಸ್ಯೆ ಇದೆ ಅನ್ನುವುದು ನಿಜ. ಆಗಿರುವುದೂ ಭಾವಾರ್ಥ ಮತ್ತು ತಾತ್ಪರ್ಯಾರ್ಥಗಳಲ್ಲಿ ಅನುವಾದ. ಈಚೆಗೆ ನಮ್ಮ ಕೆಲವು ಪ್ರಾಚೀನ ಕನ್ನಡ ಕಾವ್ಯಗಳನ್ನು ಅನುವಾದಿಸುವ ಕೆಲಸಗಳು ನಡೆಯುತ್ತಿವೆ. ಉದಾಹರಣೆಗೆ ಕವಿರಾಜಮಾರ್ಗ, ರನ್ನನ ಗದಾಯುದ್ಧ.

◆ **ತೆಲುಗು ಹಿಂದಿ ಸಂಸ್ಕೃತ ಭಾಷೆಗಳ ಪರಿಚಯವೂ ನಿಮಗಿದೆ. ಆ ಭಾಷೆಗಳಲ್ಲಿ ನಡೆಯುತ್ತಿರುವ ಸಂಶೋಧನೆಗಳಿಗೆ ಹೋಲಿಸಿದರೆ ನಾವು ಎಲ್ಲಿದ್ದೇವೆ?**

ಹಾಗೆ ಹೋಲಿಸಬಾರದು. ವಸ್ತುನಿಷ್ಠವಾಗಿ ಹೇಳಬೇಕೆಂದರೆ ಅಲ್ಲಿ ನಡೆದಿರುವ ಶೋಧನೆಗಳೂ, ಅಲ್ಲಿ ಸಿಕ್ಕುವ ಗ್ರಂಥರಾಶಿಗಳು ನಮ್ಮಲ್ಲಿನ್ನೂ ಇಲ್ಲ ಅಂತಲೇ ಹೇಳಬಹುದು. ಹಿಂದಿಯಲ್ಲಿ ಮೂಲಶಾಸ್ತ್ರಗಳ ಅನುವಾದಗ್ರಂಥಗಳು ಬಹುಮಟ್ಟಿಗೆ ದೊರೆಯುತ್ತವೆ. ತೆಲುಗಿನಲ್ಲಿ ಒಂದೊಂದು ಅಲಂಕಾರಶಾಸ್ತ್ರದ್ದೇ ಮೂರು ನಾಲ್ಕು ಅನುವಾದಗ್ರಂಥಗಳು ಸಿಗುತ್ತವೆ. ಆದರೆ ನಮ್ಮಲ್ಲಿ ಕೆಲವು ಮೂಲ ಗ್ರಂಥಗಳ ಅನುವಾದ ಒಂದೂ ಬಂದಿಲ್ಲ. ತೆಲುಗಿನಲ್ಲಿ 'ಗಾಥಾ ಶಪ್ತಶತೀ' ಕೃತಿಯ ಆರು ಅನುವಾದಗಳು, ಇಪ್ಪತ್ತು ಮೂವತ್ತು ಪಿಎಚ್.ಡಿ. ಪ್ರಬಂಧಗಳು ಬಂದಿವೆ. ನಮ್ಮಲ್ಲಿ ಆ ಗ್ರಂಥದಲ್ಲಿ 'ಪೊಟ್ಟ', 'ತುಪ್ಪ' ಎಂಬ ಕನ್ನಡ ಶಬ್ದಗಳಿವೆ ಎಂಬ ಒಂದು ಸಾಲನ್ನಿಟ್ಟುಕೊಂಡು ಕೂತಿದ್ದೇವೆ. ತೆಲುಗಿನಲ್ಲಿ ಅದು ತೆಲುಗಿಗೆ ಸೇರಿದ್ದು ಎಂಬುದನ್ನು ಪ್ರತಿಪಾದಿಸುವ ಪ್ರಬಂಧಗಳೇ ಮಂಡನೆಯಾಗಿವೆ.